# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ.

## ಸಿ.ಸಿ. ನಂ.**57/ 2019**

ಸಿಡಬ್ಲ್ಯೂ ಃ **17**
ಪಿಡಬ್ಲ್ಯೂ ಃ **2**

ದಿನಾಂಕಃ **26-09-2024**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಸಾಕ್ಷಿಯ ಹೆಸರು - ಸುಮಲತಾ

ತಂದೆಯ/ಗಂಡನ ಹೆಸರು - ಸುನೀಲಕುಮಾರ

ವಯಸ್ಸು -? **27** ವರ್ಷ

ಉದ್ಯೋಗ - ಖಾಸಗಿ ಕೆಲಸ

ವಾಸಸ್ಥಳಃ - ಬೆಂಗಳೂರು.

ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ

ದಿನಾಂಕಃ 31.05.2018 ರಂದು ಗಾಜರಕೋಟ ಗ್ರಾಮದಲ್ಲಿ ಪ್ರಾರ್ಥನೆ ಇತ್ತು. ನಾನು ಸಾಯಂಕಾಲ 6 ಗಂಟೆ ಹೋಗಿ ಪ್ರಾರ್ಥನೆ ಮುಗಿಸಿಕೊಂಡು ರಾತ್ರಿ 9 ಗಂಟೆಗೆ ಮರಳಿ ಯಾದಗಿರಿಗೆ ಜೀಪುನಲ್ಲಿ ನನ್ನ ಜೊತೆಗೆ 12 ಜನರು ಬರುವಾಗ ಮುಂಡರಗಿ ರಸ್ತೆಯ ಮೇಲೆ ಯಾದಗಿರಿಯಿಂದ ಬರುತ್ತಿದ್ದ ಬುದಿ ಟ್ಯಾಂಕರ್‌ವು ನಿರ್ಲಕ್ಷ್ಯತನದಿಂದ ಬಂದು ನಮ್ಮ ಜೀಪುಗೆ ಗುದ್ದಿ ಮತ್ತು ಪಕ್ಕದಲ್ಲಿ ಇದ್ದ ಕಟಿಂಗ್ ಶಾಪ್ ಗೆ ಸಹ ಗುದ್ದಿ ಮತ್ತು ಬೇವಿನ ಮರಕ್ಕೆ ಸಹ ಗುದ್ದಿರುತ್ತದೆ. ನಾವು ಪ್ರಯಾಣಿಸುತ್ತಿದ ಜೀಪ್ಪುನಲ್ಲಿ ಇದ್ದ 12 ಜನರ ಪೈಕಿ 4 ಜನರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಮೃತಪಟ್ಟವರ ಹೆಸರುಗಳು ಚಾಲಕ ಬಸವರಾಜ , ಎಲಿಜಬೆತ್ , ಪಾಸ್ಟರ್ ಜಾನ್ ಪಾಲ್ ಮತ್ತು ಅವರ ಮಗ ಸ್ಟೀಫನ್ ಪೀಟರ್ (Stiphen) ಸದರಿ ಅಪಘಾತದಿಂದ ನನ್ನ ತಲೆಯ ಹಿಂದುಗಡೆ ಹರಿದ ಗಾಯ ಆಗಿತ್ತು. ಉಳಿದ 7 ಜನರಿಗೂ ಸಹ ಗಾಯಾ ಆಗಿದ್ದವು. ನಂತರ ನಮ್ಮನ್ನು ತುರ್ತುಚಿಕಿತ್ಸೆ ವಾಹನದಲ್ಲಿ ಹಾಕಿಕೊಂಡು ಯಾದಗಿರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು, ಅವಾಗ ವೈದ್ಯರು ನಮ್ಮನ್ನು ಹೆಚ್ಚಿ ನ ಚಿಕಿತ್ಸೆಗಾಗಿ ರಾಯಚೂರಿನ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದರು. ಬೂದಿ ಲಾರಿಯ ಚಾಲಕನ್ನು ಅಪಘಾತ ಆದ ನಂತರ ಸ್ಥಳದಿಂದ ಓಡಿ ಹೋಗಿರುತ್ತಾನೆ ಎಂದು ನಮ್ಮಗೆ ತಿಳಿದು ಬಂದಿತ್ತು. ಸದರಿ ಓಡಿ ಹೋದ ಲಾರಿ

ಚಾಲಕನ ಹೆಸರು ಆನಂದಪ್ಪ ಇರುತ್ತದೆ. ಈ ರೀತಿಯಾಗಿ ನಾನು ಪೊಲೀಸರು ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ಬೂದಿ ಟ್ಯಾಂಕರ್ ? ಇರುವ 4 ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ನಿಪಿ 2 ರಿಂದ 5 ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಹಿರಿಯ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

<u>ಪಾಟೀ ಸವಾಲುಃ ಹಿರಿಯ ಸ.ಸ, ಅಭಿಯೋಜಕರವರಿಂದಃ</u>

ನಾವು ಹೊರಟಿದ ಜೀಪ್ಪಿ ನ ಸಂಖೆಃ ಕೆಎ-36-ಎಂ-1306 ನೇದ್ದರಲ್ಲಿ ಯಾದಗಿರಿಗೆ ಬರುತ್ತಿರುವಾಗ ರಾತ್ರಿ 10 ಗಂಟೆ ಸುಮಾರಿಗೆ ಆಶನಾಳ ಗೇಟ್ ದಾಟಿ ಮುಂಡರಗಿ ಸಮೀಪ ಬರುತ್ತಿರುವಾಗ ನಮ್ಮ ಎದುರುಗಡೆಗೆ ಯಾದಗಿರಿ ಕಡೆಯಿಂದ ಒಬ್ಬ ಬೂದಿ ಟ್ಯಾಂಕರ್ ನಂಃಕೆಎ-22-ಬಿ-7049 ನೇದ್ದರ ಚಾಲಕನ್ನು ಅತೀ ವೇಗ ಮತ್ತು ಅಲಕ್ಷ್ಯತನದಿಂದ ನಡೆಸಿಕೊಂಡು ಬಂದವನೇ ತನ್ನ ವಾಹನದ ಮೇಲೆ ನಿಯಂತ್ರಣ ಕಳೆದುಕೊಂಡು ತನ್ನ ಸೈಡ್ ನ್ನು ಬಿಟ್ಟು ಬಲಗಡೆಗೆ ಬಂದು ನಮ್ಮ ಜೀಪ್ಪಿಗೆ ಜೋರಾಗಿ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಜಿ.ಬಿ.ಆರ್ ರವರಿಂದಃ</u>

ನಮ್ಮ ಚೇರ್ಚಿನ ಪಾದ್ರಿಯರಾದ ದೇವರಾಜ್ ರವರು ಜೀಪ್ಪನ್ನು ಬಾಡಿಗೆಗೆ ನೇಮಿಸಿದ್ದರು. ಆ ದಿನ ದೇವರಾಜ್ ರವರು ಸಹ ನಮ್ಮ ಜೊತೆಗೆ ಇದ್ದರು. ಹತ್ತಿಕುಣಿ ಕ್ರಾಸ್ ನಲ್ಲಿ ನಾವು ಎಲ್ಲಾರು ಸೇರಿ ಸಾಯಂಕಾಲ 6 ಗಂಟೆಗೆ ಬಿಟ್ಟಿದ್ದೇವು. ನಾವು ಗಾಜರಕೋಟ್ ಗ್ರಾಮಕ್ಕೆ ತಲುಪಿದ್ದಾಗ ರಾತ್ರಿ 7-30 ಗಂಟೆ ಆಗಿತ್ತು. ಅಲ್ಲಿ ನಾವು ಒಂದು ಗಂಟೆಯ ವರೆಗೆ ಪ್ರಾರ್ಥನೆ ಮಾಡಿದ ನಂತರ ಊಟವನ್ನು ಸಹ ನಾವು ಅಲ್ಲೇ ಮಾಡಿರುತ್ತೇವೆ. ಪ್ರಾರ್ಥನೆಯನ್ನು ರಾತ್ರಿ 9 ಗಂಟೆಯ ವರೆಗೆ ಮಾಡಿರುತ್ತೇವೆ. ಊಟ ಮಾಡಲು ಸುಮಾರು 1 ಗಂಟೆ ಸಮಯವನ್ನು ತೆಗೆದುಕೊಂಡಿರುತ್ತೇವೆ. ನೀವು ಗಾಜರಕೋಟೆ ಗ್ರಾಮವನ್ನು ಬಿಟ್ಟಾಗ ಸುಮಾರು 10-30 ಗಂಟೆ ಆಗಿತ್ತು ಎಂದರೆ ಸಾಕ್ಷಿಯು ನಾವು ಜೀಪ್ಪಿನಲ್ಲಿ ಇದ್ದಾಗ

ರಾತ್ರಿ 9 ಗಂಟೆ ಆಗಿತ್ತು ಎಂದು ಹೇಳುತ್ತಾರೆ. ನಾವು ರಾತ್ರಿ 9 ಗಂಟೆಗೆ ಜೀಪ್ಪಿನಲ್ಲಿ ಇದ್ದೇವು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಗಾಜರಕೋಟ್ ಗ್ರಾಮದಿಂದ ಯಾವ ಮಾರ್ಗದ ಮೂಲಕ ನೀವು ಬರುತ್ತಿದ್ದೀರಿ ಎಂದರೆ ಸಾಕ್ಷಿಯು ನನಗೆ ಮಾರ್ಗ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಜೀಪ್ಪಿನಲ್ಲಿ ಎಷ್ಟು ಜನರನ್ನು ಸಾಗಾಟ ಮಾಡುವ ಸಾರ್ಮರ್ಥ್ಯ ಹೊಂದಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಾವು ಪ್ರಯಾಣಿಸುತ್ತಿದ್ದ ಜೀಪು ಖಾಸಗಿ ಒಡೆತನದ್ದು ಇತ್ತು. ಚಾಲಕನ ಪಕ್ಕದಲ್ಲಿ ಎರಡು ಜನ ಕುಳಿತ್ತಿದ್ದರು ಮಧ್ಯದ ಶೀಟ್‌ದಲ್ಲಿ 4 ಜನರು ಕುಳಿತ್ತಿದ್ದೇವು ಹಾಗೂ ಹಿಂಬದಿಯ ಆಸನಗಳಲ್ಲಿ ದೊಡ್ಡವರು 4 ಜನ ಹಾಗೂ ಚಿಕ್ಕವರು 2 ಜನ ಕುಳಿತ್ತಿದ್ದರು. ನಾನು ಜೀಪಿನ ಹಿಂಬದಿಯ ಆಸನದಲ್ಲಿ ಕುಳಿತ್ತಿದ್ದೆ. ಹಿಂಬದಿಯ ಆಸನದಲ್ಲಿ ಎದರ ಬದರು ಕುಳಿತುಕೊಳ್ಳುತ್ತಾರೆ ಎಂದರೆ ಸರಿ. ನಾವು ಎದರ ಬದರ ಕುಳಿತುಕುಂಡು ಮಾತನಾಡುತ್ತಿರುವಾಗ ಮುಂದೆ ಏನು ಆಗುತ್ತೆ ಎಂದು ನಮ್ಮಗೆ ಕಾಣುವುದಿಲ್ಲ ಎಂದರೆ ಸಾಕ್ಷಿಯು ನಾವು ಮುಂದೆ ನೋಡುತ್ತ ಕುಳಿತ್ತಿದ್ದೇವು ಎಂದು ಹೇಳುತ್ತಾರೆ. ಜೀಪಿನ ಮಧ್ಯದ ಆಸನದಲ್ಲಿ ಎತ್ತರ ವ್ಯಕ್ತಿಗಳು ಕುಳಿತ್ತಾಗ ಜೀಪಿನ ಮುಂದುಗಡೆಯ ದೃಶ್ಯ ಕಾಣುವುದಿಲ್ಲ ಎಂದರೆ ಸರಿಯಲ್ಲ.

ಅಪಘಾತವು ಮುಂಡರಗಿ ಊರಲ್ಲಿ ಆಗಿದ್ದೇಯೇ ಅಥವಾ ಊರು ಆದ ನಂತರ ಆಗಿದೆಯೇ ಎಂದರೆ ಸಾಕ್ಷಿಯು ಮುಂಡರಗಿ ಊರಿನ ಹತ್ತಿರ ಅಪಘಾತ ಆಗಿರುತ್ತದೆ ಎಂದು ಹೇಳುತ್ತಾರೆ. ಅಪಘಾತ ಸ್ಥಳದಿಂದ ಮುಂಡರಗಿ ಊರು ಎಷ್ಟು ಅಂತರದಲ್ಲಿ ಇತ್ತುಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಗುರುಮಿಠಕಲ್ - ಯಾದಗಿರಿ ರಸ್ತೆಯು ರಾಷ್ಟ್ರೀಯ ಹೆದ್ದಾರಿ ರಸ್ತೆ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಅಷ್ಟೊಂದು ಗೊತ್ತು ಇರುವುದಿಲ್ಲ ಆದರೆ ದೊಡ್ಡ ರಸ್ತೆ ಇರುತ್ತದೆ ಎಂದು ಹೇಳುತ್ತಾರೆ. ಸದರಿ ದೊಡ್ಡ ರಸ್ತೆಯ ಮೇಲೆ ಬಿಳಿ ಬಣ್ಣದಿಂದ ಹಾಕಿದ ರಸ್ತೆ ವಿಭಜನೆ ಗುರುತು ಇರುತ್ತದೆ ಎಂದರೆ ಸಾಕ್ಷಿಯು ಅಲ್ಲಿ ಬಿಳಿ ಬಣ್ಣ ಹಾಕಿದ ರಸ್ತೆ ವಿಭಜನೆ ಇರಲಿಲ್ಲ ಎಂದು ಹೇಳುತ್ತಾರೆ. ರಾಷ್ಟ್ರೀಯ ಹೆದ್ದಾರಿ ಮೇಲೆ ರಸ್ತೆಯ ವಿಭಜನೆ ಯ ಗುರುತು ಇದ್ದರು ಸಹ ನಾನು ಇರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಅಪಘಾತ ಸ್ಥಳದ ಮೇಲೆ ಸಾಕಷ್ಟು ವಾಹನಗಳು ಚಲಾಯಿಸುತ್ತವೆ ಎಂದರೆ ಸಾಕ್ಷಿಯು ನಾವು ರಾಷ್ಟ್ರೀಯ ಹೆದ್ದಾರಿ ರಸ್ತೆಯ ಮೇಲೆ ಹೋಗಿರುವುದಿಲ್ಲ ಹಳ್ಳಿಗಳ ರಸ್ತೆಯ ಮೂಲಕ

ಹೋಗಿರುತ್ತೇವೆ ಎಂದು ಹೇಳುತ್ತಾರೆ. ನಮ್ಮ ಜೀಪಿನ ಚಾಲಕನ ಹೆಸರು ಬಸವರಾಜು ಇರುತ್ತದೆ. ಆತನ ಪರಿಚಯ ನನಗೆ ಇರುವುದಿಲ್ಲ. ನಮ್ಮ ಜೀಪಿನ ಚಾಲಕನ್ನು ಚಾಲನಾ ಪರವಾನಿಗೆ ಪತ್ರವನ್ನು ಹೊಂದಿದ್ದನೋ ಅಥವಾ ಇಲ್ಲ ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿತನ್ನು ತನ್ನ ಲಾರಿಯನ್ನು ಅತೀ ವೇಗವಾಗಿ ಚಲಾಯಿಸಿಕೊಂಡು ಬಂದು ನಮ್ಮ ಜೀಪಿಗೆ ಡಿಕ್ಕಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಜೀಪಿನ ಚಾಲಕನೇ ತನ್ನ ಜೀಪ್ಪನ್ನು ಅಡ್ಡದಿಡ್ಡಿಯಾಗಿ ನಡೆಯಿಸಿಕೊಂಡು ಆರೋಪಿತನ ಲಾರಿಗೆ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಲಾರಿಯೇ ಬಂದು ನಮ್ಮ ವಾಹನಕ್ಕೆ ಡಿಕ್ಕಿಪಡಿಸಿರುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಲಾರಿಯನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಗುರುತು ಹಿಡಿಯಲು ಆಗುವುದಿಲ್ಲ ಎಂದರೆ ಸರಿ. ಅಪಘಾತ ಆದಾಗ ಲಾರಿಯ ಚಾಲಕನ ಹೆಸರು ನನಗೆ ಗೊತ್ತಿರಲಿಲ್ಲ ಆದರೆ ಆ ಮೇಲೆ ಆತನ ಹೆಸರು ನನಗೆ ಗೊತ್ತಾಗಿರುತ್ತದೆ. ಲಾರಿಯ ಚಾಲಕನನ್ನು ನಾನು ನೋಡಿರುವುದಿಲ್ಲ. ನಮ್ಮ ಜೀಪಿನ ತಪ್ಪಿ ನಿಂದ ಆಗಿದ್ದರು ಸಹ ಪೊಲೀಸರ ಮಾತನ್ನು ಕೇಳಿ ಆನಂದಪ್ಪ ತಪ್ಪಿ ನಿಂದ ಅಪಘಾತ ಆಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ದಿನ ಲಾರಿಯನ್ನು ಆರೋಪಿತನ್ನು ಚಲಾಯಿಸುದಿದ್ದರು ಸಹ ಪೊಲೀಸರ ಮಾತನ್ನು ಕೇಳಿ ಆರೋಪಿತನ್ನು ಲಾರಿಯನ್ನು ಚಲಾಯಿಸುತ್ತಿದ್ದನು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತನ್ನು ವಾಹನ ಚಾಲನಾ ಪರವಾನಿಗೆ ಪತ್ರವನ್ನು ಹೊಂದಿರುವ ಕಾರಣ ಅಪಘಾತದ ಪರಿಹಾರವನ್ನು ಪಡಿಯುವ ಸಲುವಾಗಿ ಆತನನ್ನು ಈ ಪ್ರಕರಣದಲ್ಲಿ ಆರೋಪಿಯನ್ನಾಗಿ ಸೇರ್ಪಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.